ಪಿ.ಡಬ್ಲೂ-1

**<u>ದಿಃ 02.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಶ್ರೀ.ಎಸ್.ಎಂ.ಕೆ ವಕೀಲರಿಂದಃ 2 ನೇ ಪ್ರತಿವಾದಿಯ ಪರವಾಗಿಃ</u>**

20) ದಾವಾ ಶೆಡ್ಯೂಲ್ "ಎ" ದಲ್ಲಿ ಇರುವಂತಹ ಕೃಷಿ ಜಮೀನುಗಳನ್ನು ಪ್ರಸ್ತುತವಾಗಿ ನನ್ನ ತಮ್ಮನು ಸಾಗುವಳಿ ಮಾಡುತ್ತಾನೆ. ದಾವಾ ಆಸ್ತಿ ಆರ್.ಎಸ್ ನಂಬರಃ 310/1ಎ, 311/1 ಮತ್ತು ಸಿ.ಟಿ.ಎಸ್ ನಂಬರಃ 538/ಬಿ ಈ ಎಲ್ಲ ಆಸ್ತಿಗಳು 3 ನೇ ಪ್ರತಿವಾದಿಯ ಪಾಲಿಗೆ ನೊಂದಾಯಿತ ಪಾಲು ವಾಟ್ನಿಯ ಪ್ರಕಾರ ಬಂದಿರುತ್ತವೆ ಅಂದರೆ ನನಗೆ ಗೊತ್ತಿರುವದಿಲ್ಲ. ಪ್ರತಿವಾದಿ ನಂಬರಃ 3 ಮತ್ತು ನನ್ನ ತಾಯಿ ನಾಗಮ್ಮ ಮತ್ತು ನಮ್ಮ ತಂದೆ ಚೆನ್ನಬಸಪ್ಪ ಮತ್ತು ನನ್ನ ಮೃತ ತಮ್ಮ ಮಲ್ಲಿಕಾರ್ಜುನ ಇವರೆಲ್ಲರೂ ಸೇರಿ ಮೇಲೆ ಹೇಳಿದ ದಾವಾ ಆಸ್ತಿಗಳ ಕುರಿತಾಗಿ ಪಾಲು ವಾಟ್ನಿ ಪತ್ರ ಮಾಡಿರುತ್ತಾರೆ ಅಂದರೆ ಆ ವಿಷಯ ನನಗೆ ಗೊತ್ತಿರುವದಿಲ್ಲ. ಪಾಲು ವಾಟ್ನಿ ಪತ್ರ ಆಗುವ ಮೊದಲು ನಮ್ಮ ತಂದೆ ದಾವಾ ಆಸ್ತಿ ರಿ.ಸ.ನಂಬರಃ 311/1 ಈ ಆಸ್ತಿಯನ್ನು ಕರ್ನಾಟಕ ಬ್ಯಾಂಕ ಹಾವೇರಿ ಶಾಖೆಯಲ್ಲಿ ಅಡಮಾನ ಇಟ್ಟು, ಆ ಆಸ್ತಿಯ ಮೇಲೆ ರೂ.4,50,000/- ಸಾಲವನ್ನು ಪಡೆದಿದ್ದರು ಅಂದರೆ ನನಗೆ ಗೊತ್ತಿರುವದಿಲ್ಲ.

21) ನನ್ನ ಗಂಡನಾದ ಆನಂದಪ್ಪಗೌಡ ಈತನು ಸೊರಬ ತಾಲೂಕಿನಲ್ಲಿ ಇರುವಂತಹ ಕೃಷಿ ಜಮೀನಾದ ಸರ್ವೆ ನಂಬರಃ 129/1ಎ ಈ ಅಸ್ತಿಯನ್ನು ಖರೀದಿಗೆ ತೆಗೆದುಕೊಳ್ಳುವ ಪೂರ್ವದಲ್ಲಿ ನೊಂದಾಯಿತವಲ್ಲದ ಖರೀದಿ ಕರಾರು ಪತ್ರ ಮಾಡಿಕೊಂಡಿದ್ದರು ಅಂದರೆ ಆ ವಿಷಯ ನನಗೆ ಗೊತ್ತಿರುವದಿಲ್ಲ. ಸೊರಬ ತಾಲೂಕಿನಲ್ಲಿ ಇರುವ ಕೃಷಿ ಜಮೀನಾದ ಸರ್ವೆ ನಂಬರಃ 129/1ಎ ಈ ಆಸ್ತಿಯನ್ನು ನನ್ನ

ಗಂಡನಾದ ಆನಂದಪ್ಪಗೌಡ ಈತನು ಖರೀದಿ ಕರಾರು ಪತ್ರ ಮಾಡಿಕೊಳ್ಳುವಾಗ ಸದರಿ ಆಸ್ತಿಯನ್ನು ಆತನ ಹೆಸರಿನಲ್ಲಿ ಮಾಡಿಕೊಳ್ಳಲು ಮುಂಗಡ ಹಣವನ್ನು ಕೊಡಲು ಆತನಲ್ಲಿ ಅಷ್ಟು ಹಣ ಇರದೇ ಇರುವ ಕಾರಣ ನನ್ನ ಸಹೋದರನಾದ 3 ನೇ ಪ್ರತಿವಾದಿ ಬಾಬು ಇವರಿಂದ ರೂ.25,000/- ನನ್ನ ಮುಖಾಂತರ ಹಣದ ಸಹಾಯ ಮಾಡಲು ಕೊಡಸಿದ್ದರು ಅಂದರೆ ಆ ವಿಷಯ ನನಗೆ ಗೊತ್ತಿರುವದಿಲ್ಲ.

**22)** ಸದರಿ ಸಮಯದಲ್ಲಿ ನಾನು ನನ್ನ ಗಂಡನಿಗೆ ಹಣಕಾಸಿನ ಸಹಾಯ ಮಾಡಲು ನನ್ನ ಸಹೋದರನಾದ 3 ನೇ ಪ್ರತಿವಾದಿ ಬಾಬು ಈತನಿಂದ ರೂ.25,000/- ಗಳನ್ನು ತೆಗೆದುಕೊಂಡು ಕೊಟ್ಟಿದ್ದೆ ಅಂದರೆ ಸರಿಯಲ್ಲ. ನಾನು ದಾವಾ ಶೆಡ್ಯೂಲ್ ಎ ಅಸ್ತಿಗಳು ನನ್ನ ಪಿರ್ತಾರ್ಜಿತ ಆಸ್ತಿ ಎಂದು ತೋರಿಸಲು ಈ ಪ್ರಕರಣದಲ್ಲಿ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಮುಂದುವರೆದು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ತಂದೆ ಚೆನ್ನಬಸಪ್ಪ ಈತನ ಜೀವಿತ ಕಾಲದಲ್ಲಿ ದಾವಾ ಶೆಡ್ಯೂಲ್ "ಎ" ಕೃಷಿ ಜಮೀನಾದ ರಿ.ಸ.ನಂಬರಃ 311/1, ರಿ.ಸ.ನಂಬರಃ 310/1 ಎ ಈ ಆಸ್ತಿಗಳ ಕುರಿತಾಗಿ ಪಾಲು ವಟ್ನಿ ಪತ್ರ ಆಗುವಾಗ ನಾನು ಸಹ ಹಾಜರಿದ್ದೆ, ಆ ವಿಷಯ ನನಗೆ ಗೊತ್ತಿರುತ್ತದೆ ಅಂದರೆ ಸರಿಯಲ್ಲ. ನನ್ನ ಮದುವೆಯನ್ನು ಮಾಡಬೇಕಾದರೆ ಸದರಿ ಮದುವೆಯ ಸಂಪೂರ್ಣ ಖರ್ಚನ್ನು ಮತ್ತು ಬಂಗಾರದ ಒಡವೆಗಳನ್ನು ಹಾಗೂ ಬೆಳ್ಳಿಯ ಒಡವೆಗಳನ್ನು ಮತ್ತು ಇತರೇ ಮನೆ ಬಳಕೆಯ ವಸ್ತುಗಳನ್ನು ನನ್ನ ತಂದೆ ಮತ್ತು ನನ್ನ ಸಹೋದರರು ಹಣವನ್ನು ಖರ್ಚು ಮಾಡಿ ನನಗೆ ಮದುವೆ ಮಾಡಿಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ.

**23)** ದಾವಾ ಶೆಡೂಲ್ "ಎ" ಎಲ್ಲ ಅಸ್ತಿಗಳು ನಮ್ಮ ತಂದೆಯಾದಂತಹ ಚೆನ್ನಬಸಪ್ಪ ಈತನ ಸ್ವಯಾರ್ಜಿತ ಆಸ್ತಿಗಳಾಗಿದ್ದರಿಂದ

ಪಿ.ಡಬ್ಲೂ-1

ಸದರಿ ಆಸ್ತಿಗಳ ಕುರಿತಾಗಿ ಎರಡು ಆಸ್ತಿಗಳನ್ನು ಪಾಲುವಾಟ್ನಿ ಪತ್ರದ ಮುಖಾಂತರ ನನ್ನ ಸಹೋದರರ ನಡುವೆ ಹಂಚಿಕೆ ಮಾಡಿದ್ದರಿಂದ ನನಗೆ ಈ ದಾವೆಯಲ್ಲಿ ಕೇಳಿದಂತೆ ಯಾವುದೇ ರೀತಿ ದಾವಾ ಶೆಡ್ಯೂಲ್ "ಎ" ಆಸ್ತಿಗಳಲ್ಲಿ ನನಗೆ ಪಾಲು ಬರುವದಿಲ್ಲ ಅಂದರೆ ಸರಿಯಲ್ಲ. ಸದರಿ ನೊಂದಾಯಿತ ಪಾಲು ವಿಭಾಗದ ಪತ್ರದ ಮುಖಾಂತರ ನನ್ನ ಸಹೊದರನಾದ ಮಲ್ಲಿಕಾರ್ಜುನ ಈತನು ಮೃತಪಟ್ಟ ನಂತರ ಆತನ ವಾರಸುದಾರರು ಮತ್ತು 3 ನೇ ಪ್ರತಿವಾದಿಯಾದಂತಹ ಬಾಬು ಇವರೆಲ್ಲರೂ ಸದರಿ ಆಸ್ತಿಗಳಲ್ಲಿ ಕಬ್ಜೆ ಹೊಂದಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದರಿಂದ ಸದರಿ ಎರಡು ಆಸ್ತಿಗಳಲ್ಲಿ ನನಗೆ ಯಾವುದೇ ರೀತಿ ಪಾಲು ಬರುವದಿಲ್ಲ ಅಂದರೆ ಸರಿಯಲ್ಲ. ಸದರಿ ನೊಂದಾಯಿತ ಪಾಲು ವಿಭಾಗದ ಕುರಿತಾಗಿ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ನಾನು ಆ ಕುರಿತಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ದಾವಾ ಶೆಡ್ಯೂಲ್ "ಎ" ಆಸ್ತಿಗಳಲ್ಲಿ ಯಾವುದೇ ರೀತಿ ಪಾಲು ಸಿಗುವದಿಲ್ಲ ಎನ್ನುವ ವಿಷಯ ಗೊತ್ತಿದ್ದರೂ ಸಹ ನಾನು 3 ನೇ ಪ್ರತಿವಾದಿಯ ಈ ಸುಳ್ಳು ದಾವೆಯನ್ನು ದಾಖಲಿಸಿ ಆತನಿಗೆ ಹೆಚ್ಚಿಗೆ ಖರ್ಚು ಮಾಡುವಂತೆ ಮಾಡಿರುತ್ತೇನೆ, ಆದ್ದರಿಂದ ಆತನ ಪರಿಹಾರ ಮತ್ತು ದಾವೆಗೆ ತಗುಲಿದ ಯಾವುದೇ ಖರ್ಚುಗಳನ್ನು ಕೊಡಲು ಬಾಧ್ಯಸ್ಥರಾಗಿರುತ್ತೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ, ಹಾವೇರಿ.